SC 1/2021
PW.6

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021** **ಅ.ಸಾ.6**

**ಚಾ.ಸಾ.9**

| | | |
|---|---|---|
| ಸಾಕ್ಷಿದಾರರ ಹೆಸರು | - | ಭೋಜ ಪೂಜಾರಿ |
| ತಂದೆಯ ಹೆಸರು | - | ಕೂಸ ಪೂಜಾರಿ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ಟ್ರಾನ್ಸ್‌ಪೋರ್ಟ್ |
| ವಿಳಾಸ | - | ಚಿತ್ರಪಾಡಿ, ಸಾಲಿಗ್ರಾಮ, ಬ್ರಹ್ಮಾವರ ತಾಲೂಕು. |

ದಿನಾಂಕಃ 21-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ10 ಇವರ ಪರಿಚಯ ಇದೆ. ಚಾಸಾ12 ಇವರ ಪರಿಚಯವೂ ಇದೆ. ಚಾಸಾ12 ಇವರು ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಾರೆ. ಚಾಸಾ4 ನನ್ನ ನೆರೆಕರೆಯವರು. ಚಾಸಾ4 ಇವರ ಅತ್ತೆ ಮಾಲತಿ ಕಾಮತ್ ಇವರ ಪರಿಚಯ ಇದೆ. ಆಕೆಯು ಮೂರು ವರ್ಷದ ಹಿಂದೆ ಕೊಲೆಯಾಗಿರುತ್ತಾರೆ. ದಿನಾಂಕ 18-02-2020 ರಂದು ಉಡುಪಿ ವೃತ್ತ ನಿರೀಕ್ಷಕರು ವೃತ್ತ ಕಚೇರಿಗೆ ನನ್ನನ್ನು ಕರೆಸಿರುತ್ತಾರೆ. ಆ ದಿವಸ ಚಾಸಾ10 ಇವರನ್ನು ಸಹಾ ಕರೆಸಿರುತ್ತಾರೆ. ಈಗ ವೀಡಿಯೋ ಕಾನ್ಪರೆನ್ಸ್ ಮೂಲಕ ನೋಡುತ್ತಿರುವ ವ್ಯಕ್ತಿ ಹಾಗೂ ಇನ್ನೊಬ್ಬ ವ್ಯಕ್ತಿ ಆನಂದ ಎಂಬಾತನು ಪೋಲಿಸರ ವಶದಲ್ಲಿದ್ದರು. ನಮ್ಮ ಸಮಕ್ಷಮದಲ್ಲಿ ಪೋಲಿಸರು ಅವರಿಂದ ಮೊಬೈಲ್ ಪೋನ್ ಗಳನ್ನು ಅಮಾನತ್ತುಪಡಿಸಿಕೊಂಡು ದಸ್ತಗಿರಿ ಕ್ರಮ ಜರುಗಿಸಿ ಮಹಜರು ಬರೆದಿರುತ್ತಾರೆ. ರಾತ್ರಿ 8-00 ಗಂಟೆ ಸುಮಾರಿಗೆ ದಸ್ತಗಿರಿ ಮಹಜರು ಬರೆದಿರುತ್ತಾರೆ. ಆ ಮಹಜರಿಗೆ ನಾನು ಮತ್ತು ಚಾಸಾ10 ಸಹಿ ಮಾಡಿರುತ್ತೇವೆ. ಆಗ ತಯಾರಿಸಿದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.16 (ಎ) ಎಂದು ಗುರುತಿಸಲಾಯಿತು. ಪ್ಯಾಕ್ ಮಾಡಿ ಸೀಲು ಮಾಡಲಾದ ಮುದ್ದೆಮಾಲುಗಳನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಜೀಯೊ

ಕಂಪೆನಿಯ ಎರಡು ಕಪ್ಪು ಬಣ್ಣದ ಮೊಬೈಲ್ ಫೋನ್ ಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು-5 ಮತ್ತು 6 ಎಂದು ಗುರುತಿಸಲಾಯಿತು.

2. ದಿನಾಂಕ 19-02-2020 ರಂದು ಸಂಜೆ 5-00 ಗಂಟೆಗೆ ಪೋಲಿಸರು ಠಾಣೆಗೆ ಬರಲು ಹೇಳಿ ನೋಟೀಸ್ ನೀಡಿರುತ್ತಾರೆ. ಆ ನೋಟೀಸ್ ನಲ್ಲಿ ನನ್ನ ಸಹಿ ಇದೆ. ನೋಟೀಸನ್ನು ನಿಪಿ.17 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ಆ ದಿನ ಕೂಡ ಚಾಸಾ10 ಇವರು ಠಾಣೆಗೆ ಬಂದಿರುತ್ತಾರೆ. ನಾವು ಠಾಣೆಗೆ ಹೋದಾಗ 1 ಮತ್ತು 2 ನೇ ಆರೋಪಿತರು ಹಾಜರಿದ್ದು ಅವರನ್ನು ಪೋಲಿಸರು ವಿಚಾರಣೆಗೆ ಒಳಪಡಿಸಿದಾಗ ಮಾಲತಿ ಕಾಮತ್ ಇವರನ್ನು ಕೊಲೆ ಮಾಡಿದ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗುವುದಾಗಿ ತಿಳಿಸಿದ್ದು ಅದರಂತೆ ನಮ್ಮನ್ನು ಹಾಗೂ ಪೋಲಿಸರನ್ನು ಆರೋಪಿತರು ಕೃತ್ಯ ಸ್ಥಳವಾದ ನಿಟ್ಟೂರು ವಿಷ್ಣುಮೂರ್ತಿ ನಗರಕ್ಕೆ ಕರೆದುಕೊಂಡು ಹೋಗಿ ಮಾಲತಿ ಕಾಮತ್ ಇವರ ಮನೆಗೆ ಕರೆದುಕೊಂಡು ಹೋಗಿ ಅವರ ಮನೆಯ ಹಾಲ್ ಅನ್ನು ತೋರಿಸಿ ಅದೇ ಸ್ಥಳದಲ್ಲಿ ಆಕೆಯನ್ನು ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಆಗ ಪೋಲಿಸರು ಕೃತ್ಯ ಸ್ಥಳವನ್ನು ಪರಿಶೀಲಿಸಿ ಮಹಜರು ಬರೆದಿರುತ್ತಾರೆ. ಆ ಮಹಜರನ್ನು ನಿಪಿ.18 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು. ಅದೇ ಸಮಯ ಛಾಯಾ ಚಿತ್ರಗಳನ್ನು ಸಹಾ ತೆಗೆಯಲಾಗಿದೆ. ಅವುಗಳನ್ನು ನೋಡುತ್ತಿದ್ದು ನಿಪಿ.19 ಮತ್ತು 20 ಎಂದು ಗುರುತಿಸಲಾಯಿತು.

3. ಮರುದಿನ ಬೆಳಿಗ್ಗೆ ಸುಮಾರು 4-00 ಗಂಟೆಗೆ ಪುನಃ ನಮ್ಮನ್ನು ಠಾಣೆಗೆ ಬರುವಂತೆ ಪೋಲಿಸರು ತಿಳಿಸಿದ್ದು ನಾನು, ಚಾಸಾ10 ಹಾಗೂ ಚಾಸಾ12 ಇವರು ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಪೋಲಿಸರು ನಮಗೆ ನೀಡಿದ ನೋಟೀಸನ್ನು ನಿಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ಆಗ ಆರೋಪಿತರು ಅವರ ಜೊತೆ ಬಂದಲ್ಲಿ ಮಾಲತಿ ಕಾಮತ್ ಈಕೆಯನ್ನು ಕೊಲೆ ಮಾಡಿ ಸುಲಿಗೆ ಮಾಡಿದ ಚಿನ್ನ ಮತ್ತು ನಗದು ಹಣವನ್ನು ತೋರಿಸಿ ಹಾಜರುಪಡಿಸುವುದಾಗಿ ತಿಳಿಸಿರುತ್ತಾರೆ.

4. ಅದರಂತೆ ಆರೋಪಿತರು, ಪೋಲಿಸರು ಹಾಗೂ ನಾವು ಕುಂದಾಪುರ ಮಾರ್ಗವಾಗಿ ಇನೋವಾ ಕಾರಿನಲ್ಲಿ ಕುಂದಾಪುರ ಮುಖಾಂತರ ಕುಮುಟಾ, ಯಲ್ಲಾಪುರ ಮಾರ್ಗವಾಗಿ ಬೆಳಗಾವಿಯಿಂದ ಗುರ್ಲಾಪುರಕ್ಕೆ ಹೋಗಿ ಅಲ್ಲಿಂದ ಒಂದು ಕಿಲೋಮೀಟರ್ ದೂರ ಕರೆದುಕೊಂಡು ಹೋಗಿ ಮಲ್ಲಿಕಾರ್ಜುನ ದೇವಸ್ಥಾನದ ಬಳಿ ವಾಹನ ನಿಲ್ಲಿಸುವಂತೆ ತಿಳಿಸಿ

ವಾಹನದಿಂದ ಇಳಿದು ಅವರ ಒಂದು ಮನೆಯ ಹಿಂದೆ ಕರೆದುಕೊಂಡು ಹೋಗಿ ಅಲ್ಲಿ ಜೋಳದ ಗದ್ದೆ ಬಳಿ ಜೋಳವನ್ನು ಸರಿಸಿ ಒಂದು ಕಲ್ಲನ್ನು ತೆಗೆದು ಅಲ್ಲಿದ್ದ ಒಂದು ಚೀಲ ತೆಗೆದು ಎರಡು ಪ್ಲಾಸ್ಟಿಕ್ ತೊಟ್ಟೆಗಳನ್ನು ತೆಗೆದು ತಮ್ಮೊಳಗೆ ಪಾಲು ಮಾಡಿಕೊಂಡ ವಸ್ತುಗಳು ಎಂದು ತೋರಿಸಿದ್ದು, ಒಂದನೇ ಆರೋಪಿಯ ಪಾಲಿಗೆ ಸೇರಿದ ಪ್ಲಾಸ್ಟಿಕ್ ತೊಟ್ಟೆಯನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಒಂಭತ್ತು ವಿವಿಧ ನಮೂನೆಯ ಆಭರಣಗಳು ಇದ್ದು ರೂ.8,000/- ನಗದು  ಹಣ ಇತ್ತು. ಆ ಅಭರಣಗಳು ಚಿನ್ನದ ಆಭರಣ ಎಂದು ಚಾಸಾ12 ಅಕ್ಕಸಾಲಿಗ ದೃಢ ಪಡಿಸಿರುತ್ತಾರೆ. ಸದ್ರಿ ಆಭರಣ ಹಾಗೂ ನಗದು ಹಣವನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅದೇ ಸಮಯ ಎರಡನೇ ಆರೋಪಿಯ ಪಾಲಿನ ಪ್ಲಾಸ್ಟಿಕ್ ತೊಟ್ಟೆಯನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಚಿನ್ನದ ಆಭರಣಗಳು ಇದ್ದು ಅವುಗಳನ್ನು ಸಹಾ ಪೋಲಿಸರು ಅಮಾನತ್ತುಪಡಿಸಿಕೊಳ್ಳುವಾಗ ಚಾಸಾ12 ಅಕ್ಕಸಾಲಿಗ ಚಿನ್ನದ ಆಭರಣ ಎಂದು ದೃಢೀಕರಿಸಿರುತ್ತಾರೆ. ಆಗ ನಮ್ಮೊಂದಿಗೆ ಚಾಸಾ.4 ನಾಗರಾಜ್ ಪ್ರಭು ಈ ಆಭರಣಗಳು ಮೃತ ಮಾಲತಿ ಕಾಮತ್ ಮತ್ತು ಆಕೆಯ ಮಕ್ಕಳಿಗೆ ಸೇರಿದ ಆಭರಣ ಎಂದು ಖಚಿತಪಡಿಸಿರುತ್ತಾರೆ. ಅವುಗಳನ್ನೆಲ್ಲಾ ಪೋಲಿಸರು ಅಮಾನತ್ತು ಪಡಿಸಿಕೊಂಡು ಮಹಜರು ಬರೆದಿರುತ್ತಾರೆ. ಆ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಆ ಮಹಜರನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.14(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಪೋಲಿಸರು ಛಾಯಾ ಚಿತ್ರಗಳನ್ನು ತೆರೆದಿರುತ್ತಾರೆ. ಆರು ಛಾಯಾ ಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ.22 ರಿಂದ 27 ಎಂದು ಗುರುತಿಸಲಾಯಿತು. ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸದ್ರಿ ಆಭರಣಗಳನ್ನು ಈಗಾಗಲೇ ಅರ್ಜಿದಾರರ ಸುಪರ್ದಿಗೆ ನೀಡಲಾಗಿದ್ದು ಅವುಗಳ ಛಾಯಾ ಚಿತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ಎರಡು ತೊಟ್ಟೆ ಮತ್ತು ಒಂದು ಹಳದಿ ಬಣ್ಣದ ಬಟ್ಟೆಯ ಚೀಲವನ್ನು ಒಟ್ಟಾಗಿ ಮುದ್ದೆಮಾಲು-7 ಎಂದು ಗುರುತಿಸಲಾಯಿತು. ಒಂದನೇ ಆರೋಪಿಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡುತ್ತಿದ್ದು ಆತನೇ ಆರೋಪಿ ಎಂದು ಗುರುತಿಸಿದ್ದೇನೆ. ಎರಡನೇ ಆರೋಪಿಯ ವಿರುದ್ಧ ವಿಭಜಿತ ಪ್ರಕರಣ ದಾಖಲು ಮಾಡಲಾಗಿದೆ.

**ಆರೋಪಿತರ  ಪರವಾಗಿ ಪಾಟೀ ಸವಾಲುಃ ಶ್ರೀ ಎಸ್.ಪಿ.ಎನ್. ವಕೀಲರಿಂದಃ**

1. ನಾನು ಟ್ರಾನ್ಸ್‌ಪೋರ್ಟ್ ವ್ಯವಹಾರ ಮಾಡುತ್ತೇನೆ. ನನ್ನ ಬಳಿ ಲಾರಿ ಮತ್ತು ಮೂರು ಟೆಂಪೋಗಳು ಇವೆ. ಪೋಲಿಸರೊಂದಿಗೆ ನಾನು ವ್ಯವಹಾರ ಹೊಂದಿಲ್ಲ. ಈ ಪ್ರಕರಣಕ್ಕೆ

ಸಂಬಂಧಿಸಿದಂತೆ ಎರಡು ಮೂರು ಬಾರಿ ಠಾಣೆಗೆ ಹೋಗಿದ್ದೇನೆ. ಮಹಜರು ಪೋಲಿಸರ ಕೈಬರಹದಲ್ಲಿದೆ. ಠಾಣೆಯಲ್ಲಿ ಮಹಜರನ್ನು ಟೈಪ್ ಮಾಡಿದ ಪೋಲಿಸರ ಹೆಸರು ಗೊತ್ತಿಲ್ಲ. ಆರೋಪಿತರನ್ನು ಠಾಣೆಯ ಸೆಲ್ ನಲ್ಲಿ ಕುಳ್ಳಿರಿಸಿದ್ದರು. ನಾನು ಹೋದಾಗ ಸೆಲ್ ನಲ್ಲಿ ಇದ್ದರು. ನಾನು ಆರೋಪಿತರೊಂದಿಗೆ ಮಾತನಾಡಿರುವುದಿಲ್ಲ. ಆರೋಪಿತರನ್ನು ಪೋಲಿಸರು ನಮ್ಮ ಸಮಕ್ಷಮ ವಿಚಾರಣೆ ಮಾಡಿರುತ್ತಾರೆ. ನಾಗರಾಜ ಪ್ರಭು ಇವರು ಘಟನೆಯ ಬಗ್ಗೆ ತಿಳಿಸಿ ಠಾಣೆಗೆ ಬರಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ನಾನು ನಾಗರಾಜ ಪ್ರಭು ರವರ ಜೊತೆಯಲ್ಲಿ ಠಾಣೆಗೆ ಹೋಗಿರುತ್ತೇನೆ. ನಾಗರಾಜ ಪ್ರಭು ನಮ್ಮ ಊರಿನವರು. ವೃತ್ತ ನಿರೀಕ್ಷಕರ ಕಚೇರಿಗೆ ಬರುವಂತೆ ಹೇಳಿರುತ್ತಾರೆ. ವೃತ್ತ ನಿರೀಕ್ಷಕರು ಗುರ್ಲಾಪುರಕ್ಕೆ ಹೋಗಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ನಿಟ್ಟೂರು ಆಸುಪಾಸಿನ ಬಗ್ಗೆ ನನಗೆ ತಿಳಿದಿದೆ. ಶ್ರೀಕಾಂತ್ ಶೆಣೈಯ ಕಾರಿನಲ್ಲಿ 19-02-2020 ರಂದು ಠಾಣೆಗೆ ಹೋಗಿರುತ್ತೇನೆ. ಆ ದಿನ ಠಾಣೆಯನ್ನು ಬಿಟ್ಟು ಬೇರೆ ಎಲ್ಲಿಗೂ ಹೋಗಿರುವುದಿಲ್ಲ. ಬಾಡಿಗೆ ಕಾರಿನಲ್ಲಿ ಗುರ್ಲಾಪುರಕ್ಕೆ  ಹೋಗಿರುತ್ತೇವೆ. ಕೋಟಾದಿಂದ ದಿನಾಂಕ 20-02-2020 ರಂದು ಬೆಳಿಗ್ಗೆ 4-00 ಗಂಟೆಗೆ ಹೊರಟಿರುತ್ತೇವೆ. ಪೋಲಿಸರೊಂದಿಗೆ ಗುರ್ಲಾಪುರಕ್ಕೆ ಹೋಗಿರುತ್ತೇವೆ. ಪೋಲಿಸರು ಇಲಾಖಾ ಜೀಪಿನಲ್ಲಿ ಬಂದಿರುತ್ತಾರೆ. ಕಾರಿನಲ್ಲಿ ನಾವು ನಾಲ್ಕು ಜನ ಮತ್ತು ಜೀಪಿನಲ್ಲಿ ಪೋಲಿಸರು ಮತ್ತು ಆರೋಪಿತರು ಇದ್ದರು. ಆರೋಪಿತರು ಮತ್ತು ಪೋಲಿಸರಿಗೆ ಜೀಪಿನಲ್ಲಿ ಏನು ಮಾತುಕತೆ ನಡೆದಿದೆ ಎಂದು ಗೊತ್ತಿಲ್ಲ.

2. ಆಭರಣ ಹಾಗೂ ನಗದನ್ನು ಹಾಜರುಪಡಿಸಿದ ಸ್ಥಳದಿಂದ 100 ಮೀ. ದೂರದಲ್ಲಿ ಮನೆಗಳು ಇವೆ. ಸ್ಥಳೀಯರು ಆಭರಣ ಹಾಜರುಪಡಿಸಿದ ಸ್ಥಳಕ್ಕೆ ಬಂದಿರುವುದಿಲ್ಲ. ಪೋಲಿಸರು ಮುಂಚೆ ಹೋಗಿದ್ದರೋ ಅಥವಾ ನೀವು ಮುಂಚೆ ಹೋಗಿದ್ದೀರೋ ಎಂಬ ಪ್ರಶ್ನೆಗೆ ಒಟ್ಟೊಟ್ಟಿಗೆ ಹೋಗಿರುತ್ತೇವೆಂದು ನುಡಿಯುತ್ತಾರೆ. ಆ ಸ್ಥಳದಿಂದ ನಿಂತು ನೋಡಿದರೆ ವಾಸದ ಮನೆಗಳು ಕಾಣಿಸುವುದಿಲ್ಲ. ಆ ಸ್ಥಳ ಸಾರ್ವಜನಿಕರು ಓಡಾಡುವ ಸ್ಥಳ ಆಗಿರುವುದಿಲ್ಲ. ನಮ್ಮ ವಾಹನವನ್ನು 200 ಮೀ. ದೂರದಲ್ಲಿ ನಿಲ್ಲಿಸಿರುತ್ತಾರೆ. ಆ ಚಿನ್ನದ ಆಭರಣಗಳ ಮಾದರಿ ಬಗ್ಗೆ ಮತ್ತು ಅದರ ನಿರ್ಧಿಷ್ಟ ತೂಕ ಎಷ್ಟು ಎಂದು ಹೇಳಲು ಬರುವುದಿಲ್ಲ. ಠಾಣೆಗೆ ಬಂದು ಆಭರಣಗಳನ್ನು ತೂಕ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ದಿನ ಆ ಸ್ಥಳಕ್ಕೆ ಹೋದದ್ದೆ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇದೇ ಒಂದು ಪ್ರಕರಣದಲ್ಲಿ ಮಾತ್ರ ಸಾಕ್ಷಿಯಾಗಿ ಬಂದಿರುತ್ತೇನೆ. ಆರೋಪಿತರಿಂದ ಪೋಲಿಸರು ಯಾವುದೇ ನಗ, ನಗದು ಮತ್ತು

ಮೊಬೈಲ್ ಫೋನ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರುಗಳನ್ನು ಠಾಣೆಯಲ್ಲಿ ತಯಾರಿಸಿದಾಗ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೃತಳು ಚಾಸಾ.4 ರವರ ಅತ್ತೆ. ಚಾಸಾ.4 ರವರಿಗೆ ಸಹಾಯ ಮಾಡಲು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಛಾಯಾ ಚಿತ್ರಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮುದ್ದೆಮಾಲು- 7 ಮತ್ತು ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.